# ರೆಹಮಾನ್ ಮೆಚ್ಚಿದ ಹೀರೊ!



'ಇವರು ನಮ್ಮ ಹೀರೋ' ಎಂದರು ನಿರ್ದೇಶಕ ಯೋಗರಾಜಭಟ್. ಅದು 'ಪರಮಾತ್ಮ' ಚಿತ್ರದ ಧ್ವನಿಮುದ್ರಿಕೆ ಸಮಾರಂಭ. 'ಪರಮಾತ್ಮ'ನ ಸಮಾರಂಭ ಎಂದ ಮೇಲೆ ಅಲ್ಲಿ ಪುನೀತ್ ಅವರೇ ನಾಯಕನಲ್ಲವೇ? ಆದರೆ, ಭಟ್ಟರು ಹೀರೊ ಎಂದು ಬಣ್ಣಿಸಿದ್ದು ಸಂಗೀತ ನಿರ್ದೇಶಕ ಹರಿಕೃಷ್ಣ ಅವರನ್ನು.

ಭಟ್ಟರ ಪ್ರಶಂಸೆ ವಾಸ್ತವದ ನೆಲೆಗಟ್ಟಿನಲ್ಲೇ ಇತ್ತು. ಜಾಕಿ, ಹುಡುಗರು ಸೇರಿದಂತೆ 'ಹಿಟ್ ಮೇಲೆ ಹಿಟ್' ಹಾಡುಗಳನ್ನು ಕೊಡುತ್ತಿರುವ ಹರಿಕೃಷ್ಣ ಕನ್ನಡ ಚಿತ್ರರಂಗದ ಇವತ್ತಿನ ಸೂಪರ್ ಸ್ಟಾರ್‌ಗಳಲ್ಲೊಬ್ಬರು. 'ಪರಮಾತ್ಮ' ಚಿತ್ರದ ಗೀತೆಗಳಿಗೆ ಕೂಡ ಕೇಳುಗರ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆಯಂತೆ. ಹರಿ ಪ್ರತಿಭೆಗೆ ಉದಾಹರಣೆಯಾಗಿ ಭಟ್ಟರು ಒಂದು ಪ್ರಸಂಗ ಹೇಳಿದರು–

'ಪರಮಾತ್ಮ' ಚಿತ್ರದ ಗೀತೆಗಳ ತಯಾರಿ ಚೆನ್ನೈನಲ್ಲಿರುವ ಎ.ಆರ್. ರೆಹಮಾನ್ ಅವರ ಸ್ಟುಡಿಯೋದಲ್ಲಿ ನಡೆಯುತ್ತಿತ್ತಂತೆ. ಅಲ್ಲಿನ ಎಂಜಿನಿಯರ್‌ಗಳೆಲ್ಲ 'ಪರಮಾತ್ಮ'ನ ಗುಂಗಿನಲ್ಲಿ ಮುಳುಗಿಹೋದರು. ಅಷ್ಟು ಮಾತ್ರವಲ್ಲ, ಹರಿ ಹಾಗೂ ಭಟ್ಟರು ಇಲ್ಲದಿರುವಾಗೊಮ್ಮೆ ಸ್ಟುಡಿಯೋಗೆ ಬಂದಿದ್ದ ರೆಹಮಾನ್, 'ಪರಮಾತ್ಮ'ನ ಹಾಡುಗಳನ್ನು ಕೇಳಿ ದಂಗಾಗಿ ಹೋದರಂತೆ. ಹರಿಗಾರುಡಿಗೆ ಮಾರುಹೋದ ಅವರು, 'ಹರಿಕೃಷ್ಣರಿಗೆ ನನ್ನ ಅಭಿನಂದನೆಗಳನ್ನು ತಿಳಿಸಿ' ಎಂದು ಹೇಳಿ ಹೋದರಂತೆ. ಈ ಪ್ರಶಂಸೆ ಯಾವ ಆಸ್ಕರ್‌ಗೆ ಕಡಿಮೆ!

ನಿರ್ದೇಶಕ ಭಟ್ಟರು ಮಾತ್ರವಲ್ಲ– ನಾಯಕ ನಟ ಪುನೀತ್, ಅವರ ಬೆನ್ನಿಗಿರುವ ರಾಘವೇಂದ್ರ ರಾಜಕುಮಾರ್ ಕೂಡ ಹರಿಕೃಷ್ಣರನ್ನು ಹೊಗಳಿದರು. ಈ ಎಲ್ಲ ಪ್ರಶಂಸೆಗಳ ನಡುವೆ ಮುದುಡಿ ಕೂತಿದ್ದ ಹರಿಕೃಷ್ಣರ ಪೊದೆಗಡ್ಡದ ಕಪ್ಪುಗಲ್ಲದಲ್ಲಿ ಕೆಂಪು ನಿಧಾನವಾಗಿ ಅಡರುತ್ತಿತ್ತು.



# ದೀಪಾವಳಿ

'ಪರಮಾತ್ಮ' ಚಿತ್ರದ ಧ್ವನಿಮುದ್ರಿಕೆ ಬಿಡುಗಡೆ ಸಮಾರಂಭದಲ್ಲಿ ನಿರ್ದೇಶಕ ಯೋಗರಾಜ ಭಟ್‌ರ ಮುಕ್ತಕಂಠದ ಪ್ರಶಂಸೆಗೆ ಪಾತ್ರರಾದವರಲ್ಲಿ ನಾಯಕಿ ದೀಪಾ ಸನ್ನಿಧಿ ಕೂಡ ಒಬ್ಬರು. 'ಚಿತ್ರದಲ್ಲಿನ ಅವರ ಪಾತ್ರ ದಕ್ಷಿಣ ಭಾರತ ಸಿನಿಮಾಗಳಲ್ಲೇ ವಿಭಿನ್ನವಾದದ್ದು ಹಾಗೂ ಆ ಪಾತ್ರವನ್ನು ದೀಪಾ ಅದ್ಭುತವಾಗಿ ನಿರ್ವಹಿಸಿದ್ದಾರೆ. ಚಿತ್ರಮಂದಿರದಿಂದ ಹೊರಬರುವ ಪ್ರೇಕ್ಷಕರನ್ನು ಆಕೆ ಕಾಡಲಿದ್ದಾರೆ' ಎನ್ನುವುದು ಭಟ್ಟರ ವ್ಯಾಖ್ಯಾನ.

ಭಟ್ಟರ ಹೊಗಳಿಕೆಯನ್ನು ನಗುತ್ತಲೇ ಸ್ವೀಕರಿಸಿದ ದೀಪಾ, ಪ್ರತಿಭಾವಂತರ ತಂಡದೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿದ್ದಕ್ಕೆ ಖುಷಿ ವ್ಯಕ್ತಪಡಿಸಿದರು. ಅಂದ ಹಾಗೆ, ದೀಪಾ ನಟನೆಯ ಇನ್ನೊಂದು ಚಿತ್ರ 'ಸಾರಥಿ' ಈಗ ಬಿಡುಗಡೆ ಹಂತದಲ್ಲಿದೆ. ಒಮ್ಮೆಗೇ ಎರಡು ದೊಡ್ಡ ಸಿನಿಮಾಗಳ ಮೂಲಕ ಪ್ರೇಕ್ಷಕರನ್ನು ಎದುರಾಗುವ ಅವಕಾಶ ಆಕೆಯದ್ದು. ಇದಲ್ಲವೇ ದೀಪಾವಳಿ!

# ಅಲೆದಾಟ ಶುರು



ಆಗ ಶುರುವಾಯಿತು, ಇನ್ನೇನು ಶುರುವಾಯಿತು ಎಂದು ಸುದ್ದಿ ಮಾಡುತ್ತಿದ್ದ, ಬಿ.ಕೆ.ಶ್ರೀನಿವಾಸ್ ನಿರ್ಮಾಣದ 'ಅಲೆಮಾರಿ' ಸಿನಿಮಾದ ಚಿತ್ರೀಕರಣ ಅಧಿಕೃತವಾಗಿ ಶುರುವಾಗಿದೆ. ಯೋಗೀಶ್ ಹಾಗೂ ರಾಧಿಕಾ ಪಂಡಿತ್ ಚಿತ್ರದ ನಾಯಕ–ನಾಯಕಿ. ಇಬ್ಬರೂ 2008ನೇ ಸಾಲಿನಲ್ಲಿ ಅತ್ಯುತ್ತಮ ನಟ–ನಟಿ ಪ್ರಶಸ್ತಿ ಪಡೆದವರು ಎನ್ನುವುದು ವಿಶೇಷ.

'ಅಲೆಮಾರಿ' ಬಗೆಗೆ ಯೋಗಿ ವಿಶೇಷ ಆಸ್ಥೆ ವಹಿಸಿದ್ದಾರೆ. ಸ್ವಂತ ಬ್ಯಾನರ್‌ನ 'ಸಿದ್ಲಿಂಗು' ಮುಗಿಸಿರುವ ಅವರು ಈಗ 'ಅಲೆಮಾರಿ'ಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡಿದ್ದಾರೆ. ಚಿತ್ರಕಥೆ ಸಿದ್ಧಪಡಿಸಲು ನಿರ್ದೇಶಕ ಸಾಂತು ಅವರೊಂದಿಗೆ ಯೋಗಿ ಮೂರು ತಿಂಗಳು ಕುಳಿತಿದ್ದರಂತೆ. ಬಾಲಿವುಡ್‌ನ 'ಪಾ' ಚಿತ್ರದ ನೆರಳು ತಮ್ಮ ಚಿತ್ರಕಥೆಯ ಮೇಲೆ ಇರುವುದರನ್ನು ಪ್ರಾಂಜಲವಾಗಿ ಒಪ್ಪಿಕೊಂಡ ಅವರಿಗೆ ಈ ಸಿನಿಮಾದ ಮೂಲಕ ಹೊಸ ಇಮೇಜ್ ಗಳಿಸುವ ಆಸೆ.

ಕಥೆಯ ಬಗ್ಗೆ, ತಮ್ಮ ಪಾತ್ರದ ಬಗ್ಗೆ ಕಾಳಜಿ ವಹಿಸುತ್ತಿರುವ ಯೋಗಿ ಬಗ್ಗೆ ರಾಧಿಕಾ ಪಂಡಿತ್ ಅವರಿಗೆ ಮೆಚ್ಚುಗೆಯಿದೆ. 'ಯೋಗಿ ತಮ್ಮ ಪಾತ್ರವನ್ನು ಚೆನ್ನಾಗಿ ಕಟೆದುಕೊಂಡಿದ್ದಾರೆ' ಎನ್ನುವುದು ಅವರ ಮೆಚ್ಚುಗೆ. ಅಂದ ಹಾಗೆ, ಈ ಚಿತ್ರದಲ್ಲವರು ಶಿಕ್ಷಕರೊಬ್ಬರ ಮಗಳಾಗಿ ನಟಿಸುತ್ತಿದ್ದಾರೆ.

■ ರಘು